
ಆರಂಭಿಸಿದಳು. ನನಗೆ ಯಾಕೋ ಅವರಿಬ್ಬರ ಮಧ್ಯೆ ನಿಲ್ಲಲು ಸಾಧ್ಯವಿಲ್ಲ ಎನಿಸಿ ಸರಸರ ನಡೆಯತೊಡಗಿದೆ. ''ಒಂದ್ನಿಮಿಷಾ ಬಂದೆ'' ಅಂತ ಅವನು ಕೂಗಿದರೂ ನಾನು ಹಿಂತಿರುಗಿ ನೋಡಲಿಲ್ಲ. ಅಂತೂ ಅವಳೊಡನೆ ಮಾತು ಮುಗಿಸಿ ಓಡೋಡುತ್ತ ಬಂದು ಸೇರಿಕೊಂಡ.

''ಏನು ಆ ಭಾಮಾಮಣಿ ನಿಮ್ಮನ್ನ ಬಹಳ ಪ್ರೀತಿಯಿಂದ ಮಾತಾಡಸ್ತಿದ್ಲು...'' ನನ್ನ ದನಿಯಲ್ಲಿನ ಅಸಹನೆ ನನಗೇ ಸ್ಪಷ್ಟವಾಗಿತ್ತು. ಅವನು ಮಾತ್ರ, ''ಏನಿಲ್ಲಪ್ಪಾ, ನಮ್ಮ ಫೇರವೆಲ್ ಡೇ ಬಗ್ಗೆ ಡಿಸ್ಕಸ್ ಮಾಡಿದ್ವಿ. ನೀವೇನು ಅಷ್ಟು ಕೂಗಿದ್ರೂ ಬಂದೇಬಿಟ್ರಿ!'' ಅಂತ ಕ್ಯಾಷುವಲ್ಲಾಗಿ ನಕ್ಕ. ನಾನು ಏನೂ ಹೇಳಲಿಲ್ಲ. ಹಾಸ್ಟೆಲ್‌ವರೆಗೆ ಬಂದು ವಾಪಸ್ಸಾದ.



ಅವಳ ಕಾಟ ಯಾಕೋ ಅತಿಯಾಯ್ತು ಅಂತ ನನಗೆ ಅನುಮಾನ ಶುರುವಾಯ್ತು. ಸ್ಟಡಿ ಮಾಡುವ ಮನಸ್ಸು, ತಾಳ್ಮೆ ಎರಡೂ ಇಲ್ಲದಿದ್ದರೂ ದಿನಾಲೂ ಮಧ್ಯಾಹ್ನದ ಮೇಲೆ ಸರಿಯಾಗಿ ಲೈಬ್ರರಿಗೆ ಬರುವುದು, ನಾವು ಹೊರಡುವ ಸಮಯಕ್ಕೆ ಸರಿಯಾಗಿ ಅವನನ್ನು ಅಡ್ಡಗಟ್ಟಿ ಮಾತಿಗೆ ನಿಲ್ಲುವುದು. ಯಾಕೆ ಇವಳು ನನ್ನೊಡನೆ ಈ ರೀತಿ ದ್ವೇಷ ಸಾಧಿಸುತ್ತಿದ್ದಾಳೆ? ಅವಳ ಉದ್ದೇಶ ಏನು? ಹೊರಗೆ ಡಜನ್‌ಗಟ್ಟಲೆ ಹುಡುಗರೊಂದಿಗೆ ತಿರುಗುತ್ತಾಳೆ, ಅವರಲ್ಲಿ ಯಾರಾದರೂ ಸಿರಿಯಸ್ಸಾಗಿ ಪ್ರಪೋಸ್ ಮಾಡುವ ಹಂತಕ್ಕೆ ಬಂದೊಡನೆ ದೂರವಾಗಿಬಿಡುತ್ತಾಳೆ. ಮತ್ತ್ಯಾರೋ ಹೊಸಬರೊಡನೆ ಓಡಾಟ. ಅಂಥದ್ದರಲ್ಲಿ ಇವನೂ ಒಬ್ಬ ಬೇಕೇ ಬೇಕು ಎಂಬಂತೆ ಹಟತೊಟ್ಟಂತೆ ಬಂದು ನಾವು ಮಾತನಾಡುವುದನ್ನು, ಜೊತೆಯಲ್ಲಿ ಹೋಗುವುದನ್ನು ಬೇಕೆಂದೇ ತಪ್ಪಿಸುತ್ತಿದ್ದಾಳೆ. ಹೊಟ್ಟೆಯಲ್ಲಾಗುವ ಸಂಕಟವನ್ನು ಯಾರ ಮುಂದೂ ಹೇಳಲಾರದವಳಾಗಿದ್ದೆ.